ಎಂ.ಜಿ. ಉಮಾ, ಬಳ್ಳಾರಿ
'ಪಾದಯಾತ್ರೆ'ಯ ನಿಜವಾದ ಅರ್ಥವೇನು?



ನಮಗೆ ಮತ ನೀಡಿದವರನ್ನು ಬೀದಿ ಅಲೆಯುವ ಸ್ಥಿತಿಗೆ ತರುತ್ತೇವೆಂಬ ಅಪ್ರಕಟಿತ ಆಶ್ವಾಸನೆ.

ಮೋಹನ ರು. ಹಣಗಿ, ಅಮೀನಗಡ
ಗುರು, ತಾಯಿ, ವೈದ್ಯರ ದಿನಗಳಿರುವಂತೆ ಸಾಹಿತಿಗಳ ದಿನಾಚರಣೆ ಏಕಿಲ್ಲ?
ಇತ್ತಂತೆ, ಘೋರ ಭಾಷಣದ ಅಬ್ಬರಕ್ಕೆ ತತ್ತರಿಸಿ ನಿಲ್ಲಿಸಿದರಂತೆ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಈಗಿನ ಯುವಜನತೆ ಮೊಬೈಲನ್ನು ತಮ್ಮ ಹಾಸಿಗೆ ದಿಂಬುಗಳೊಡನೆ ಇರಿಸಿಕೊಂಡು ಮಲಗುವರಲ್ಲ...?
ಮಲಗುವ ಸ್ಥಳದಲ್ಲಿ ಒಳ್ಳೆಯ ವೈಬ್ರೇಷನ್ಸ್ ಇರಬೇಕೆಂದು ಯಾರೋ ಹೇಳಿರಬೇಕು!

ರತ್ನಾ ರಾಜ್‌ಕುಮಾರ್, ಹಾಸನ
ಆಗಿನ ಹಾಡುಗಳು ಜೋಗುಳದಂತಿದ್ದವು. ಈಗಿನ ಹಾಡುಗಳು....?



ಸೈರನ್, ನಗಾರಿ, ಬೊಬ್ಬೆ, ಹೇಷಾರವ. ಗೀಳುಗಳ ಕಠೋರ ಮಿಶ್ರಣ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
ಈ ರಾಮ್‌ನ ಕಾಲು ತಗುಲಿ ಈ ತನಕ ಯಾವ ಕಲ್ಲಿಗೂ ಜೀವ ಬಂದಿಲ್ಲವಾ ರಾಂ?
ಬಂದಿದೆ. ಹಲವಾರು ಸೈಕಲ್ಲಿಗೆ.

ಆರ್. ಮಧುಸೂದನ್, ಹಾಸನ
ವರ್ಧಮಾನ, ಪ್ರವರ್ಧಮಾನ, ಇವೆರಡರ ಶ್ರೇಷ್ಠತೆಯನ್ನು ಚುಟುಕಾಗಿ ಹೇಳಬಲ್ಲಿರಾ?
ವರ್ಧಮಾನ ಶಿಖರ, ಪ್ರವರ್ಧಮಾನ ಏರುದಾರಿ.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ
ಸಚಿವರ ಗ್ರಾಮವಾಸ್ತವ್ಯ ದಿಢೀರ್ ಭೇಟಿಯಾಗದೆ ಹಲವು ದಿನಗಳ ಮುಂಚೆಯೇ ನಿರ್ಧಾರವಾಗುವುದು ತಪ್ಪಲ್ಲವೆ?
ತಪ್ಪಿಲ್ಲ. ಬರ, ಪ್ರವಾಹ, ಡೆಂಗ್ಯೂ, ಸಚಿವರ ಭೇಟಿಗಳ ಬಗ್ಗೆ ಮುನ್ನೆಚ್ಚರಿಕೆ ಅವಶ್ಯ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಕಲ್ಪನೆ ಎನ್ನುವುದು ವಾಸ್ತವದ ವಿರೋಧಿಯೆ?
ಅಲ್ಲ. ಮುಂದಿನ ದಿನಗಳ ಬೆಳವಣಿಗೆಯ ಬ್ಲೂಪ್ರಿಂಟ್.

ಎನ್.ವಿ. ಶ್ರೀನಿವಾಸ್, ಮೈಸೂರು
ಸಿನಿಮಾಗಳಲ್ಲಿ ನಾಯಕನ ತಾಯಿ ಯಾವಾಗಲೂ ವಿಧವೆಯೇ ಆಗಿರುತ್ತಾಳಲ್ಲಾ, ಯಾಕೆ?
ಅಪ್ಪನ ಪಾತ್ರಧಾರಿಯ ದುಡ್ಡು ಉಳಿಸಲು.

ಎಂ.ಎ. ಕುಮಾರ್, ಬೆಂಗಳೂರು
ಬೋಡು ತಲೆ ಮಿರುಗುವುದೇಕೆ?
ಕೇಶಬಂಧನದಿಂದ ಸ್ವಾತಂತ್ರ್ಯ ಪಡೆದ ಖುಷಿಗೆ.

ಅಮರಯ್ಯಾ ಪತ್ರಿಮಠ, ಸುರಪುರ
ಯೋಗ ಮತ್ತು ಧ್ಯಾನದ ನಡುವಿನ ಅಂತರವೇನು?
ತನು ಬಾಗಿದರೆ ಯೋಗ, ಮನ ಮಾಗಿದರೆ ಧ್ಯಾನ.

ಬಿ. ಚಂದ್ರೇಗೌಡ, ಬೆಂಗಳೂರು
ರಾಜಕೀಯ ಇದು ಪದವೋ, ವಾಕ್ಯವೋ?
ಎರಡೂ ಅಲ್ಲ. ನಿರಂತರ ಸಾಗುವ ಮಸಾಲಾಭರಿತ ಧಾರಾವಾಹಿ.

ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು
ಕೆಲ ಮಹಿಳೆಯರು ಸಾಕುಪ್ರಾಣಿಗಳನ್ನು ಪ್ರೀತಿಸುವಷ್ಟು ಬಂಧುಬಳಗವನ್ನೇ ಪ್ರೀತಿಸುವುದಿಲ್ಲವಲ್ಲಾ...?
'ಬಳಗಗಳು ಬೊಗಳುತ್ತವೆ, ಸಾಕುಪ್ರಾಣಿಗಳು ಬಾಲ ಆಡಿಸುತ್ತವೆ' ಎಂದಳಾ ಮಹಿಳೆ.

ಪ್ರಕಾಶ್ ಎಚ್.ಆರ್. ಹೊಸನಗರ
ಪ್ರೀತಿ, ಪ್ರೇಮ ಜುಗಲ್ ಬಂಧಿಯಾ?
ಹೆಚ್ಚಾಗಿ ಜಗಳ್‌ಬಂದಿ.

## ಬಹುಮಾನಿತ ಪ್ರಶ್ನೆ

ವೀಣಾ ರವಿ ಪೈ, ಕಾಸರಕೋಡ
ಪಕ್ಷಿಗಳು ಭವಿಷ್ಯ ನುಡಿಯುತ್ತವೆಯೆ?
'ನಾವು ಕಾಲವಾದರೆ ನಿಮಗೆ ಭವಿಷ್ಯವಿಲ್ಲ' ಎಂಬುದೇ ಆ ಭವಿಷ್ಯ.

ರವೀಂದ್ರನಾಥ ಯಡಹಳ್ಳಿ, ಬೀಳಗಿ
ಸೂತ್ರಧಾರಿಗೂ, ಪಾತ್ರಧಾರಿಗೂ ಇರುವ ವ್ಯತ್ಯಾಸವೇನು ಶಿವಾ?
ಸೂತ್ರಧಾರ ಸೂಜಿ; ಪಾತ್ರಧಾರಿ ದಾರ.

ನಾಜ್ಯೋತಿ, ಹೂವಿನಹಡಗಲಿ
ನಾವು ಸದಾ ಸಮಯವನ್ನು ಕಳೆದುಕೊಳ್ಳುತ್ತೇವೆ. ಈ ಜಗದಲ್ಲಿ ಸಮಯವನ್ನು ಗಳಿಸುವವನು ಯಾರು?
ಗಲ್ಲುಶಿಕ್ಷೆ ರದ್ದಾದ ವ್ಯಕ್ತಿ.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು
ಯಾವುದೇ ಬೀಜವನ್ನು ಬಿತ್ತಿದರೂ ಉತ್ಕೃಷ್ಟವಾಗಿ ಫಲ ನೀಡುವ ಜಾಗ ಯಾವುದು?



ಮಕ್ಕಳ ಮನಸ್ಸು.

ಮುಕುಂದ ಹೆರಕಲ್ಲ, ಬೆಂಗಳೂರು
ಮೂಲರಾಮ ಮತ್ತು ದಿಗ್ವಿಜಯರಾಮರಲ್ಲಿ ಯಾರು ಶ್ರೇಷ್ಠರು?
ದಿಗ್ವಿಜಯರಾಮ ರಾಜನಾಗಿ ಶ್ರೇಷ್ಠ. ಮೂಲರಾಮ ಮಾನವನಾಗಿ ಶ್ರೇಷ್ಠ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಮಂತ್ರಿಗಳ ಮರಣಾನಂತರ ಅವರ ಅಂಗಗಳನ್ನು ಸಾಮಾನ್ಯವಾಗಿ ದಾನ ಮಾಡದಿರುವ ಕಾರಣ?
ಅವರಿಂದ ನೇತ್ರದಾನ ಪಡೆದವನು ಕುರ್ಚಿ ಕಂಡಾಗಲೆಲ್ಲ ನಿಂತುಬಿಡುತ್ತಿದ್ದನಂತೆ. ಅಂದಿನಿಂದ...

■ ರಾಮ್